**ಸಿ.ಸಿ.ನಂ.: 1283/2025**

ಪಿ.ಡಬ್ಲ್ಯೂ: 1

(ಇಂದು ದಿನಾಂಕಃ **26-12-2025** ರಂದು ಸತ್ಯ ಪ್ರತಿಜ್ಞೆಯ ಮೇರೆಗೆ ಪ್ರಮಾಣ ವಚನ ಬೋಧಿಸಲಾಯಿತು.)

**ಪಾಟೀ ಸವಾಲು - ಆರೋಪಿ ಪರ ಶ್ರೀ. ರಂಜನ ನಾಯ್ಕ ವಕೀಲರಿಂದ**

1. ಈ ಪ್ರಕರಣದ ಆರೋಪಿತನಿಗೆ ವ್ಯವಹಾರದ ಸಲುವಾಗಿ ಸಾಲವನ್ನು ನೀಡಿರುತ್ತೇನೆ. ಸದ್ರಿ ವ್ಯವಹಾರವು ಯಾವುದು ಎಂದು ನನಗೆ ನಿರ್ದಿಷ್ಟವಾಗಿ ಹೇಳಲು ಬರುವುದಿಲ್ಲ. ಆರೋಪಿತನು ಹನೇಹಳ್ಳಿ ಗ್ರಾಮ ಪಂಚಾಯತನ ಅಧ್ಯಕ್ಷ ಎಂದರೆ ಸರಿ. ಆರೋಪಿತನು ನಮ್ಮ ಫಿರ್ಯಾದಿ ಸಂಸ್ಥೆಗೆ ಬೇರೆಯವರಿಗೆ ಸಾಲವನ್ನು ಶಿಫಾರಸ್ಸು ಮಾಡಲು ಬರುತ್ತಾರೆ ಎಂದರೆ ಸಾಕ್ಷಿಯು ಆರೋಪಿತನ ಸಾಲಕ್ಕೆ ಬರುವ ವಿಷಯ ನನಗೆ ತಿಳಿದಿದೆ ಎಂದು ನುಡಿಯುತ್ತಾರೆ. ಸಾಲವನ್ನು ನೀಡುವ ಸಂದರ್ಭದಲ್ಲಿ ಆರೋಪಿತನಿಂದ ವ್ಯವಹಾರಕ್ಕೆ ಸಂಬಂಧಿಸಿದಂತೆ ಯಾವುದೇ ದಾಖಲಾತಿಗಳನ್ನು ತೆಗೆದುಕೊಂಡಿರುವುದಿಲ್ಲ. ಈ ಪ್ರಕರಣದ ಸಾಲವು ವ್ಯವಹಾರ ಕ್ಕೆ ಸಂಭಂಧಿಸಿದ ಸಾಲ ಎಂಬುವ ಬಗ್ಗೆ ಯಾವುದೇ ದಾಖಲಾತಿಯನ್ನು ಹಾಜರುಪಡಿಸಿಲ್ಲ ಎಂದರೆ ಸರಿ.

2. ಸಾಲವನ್ನು ನೀಡಬೇಕಾದರೆ ಪ್ರಥವಮವಾಗಿ ಸಾಲದ ಅರ್ಜಿಯನ್ನು ನೀಡಬೇಕು ಎಂದರೆ ಸರಿ. ಸಾಲದ ಅರ್ಜಿ ನೀಡುವ ಪೂರ್ವದಲ್ಲಿ ಸಾಲಗಾರನಾಗಲೀ ಅಥವಾ ಸಾಲಗಾರನ ವ್ಯವಹಾರದ ಕುರಿತಾಗಿ ನಮಗೆ ಯಾವುದೇ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ಈ ಪ್ರಕರಣದ ಸಾಲಗಾರನಿಗೆ ಸಾಲವನ್ನು ನೀಡುವ ಸಂದರ್ಭದಲ್ಲಿ ಆತನು ಯಾವ ವ್ಯವಹಾರವನ್ನು

ಮಾಡುತ್ತಿದ್ದ ಹಾಗೂ ಆತನ ಉತ್ಪನ್ನದ ಕುರಿತಾಗಿ ಮಾಹಿತಿ ಇತ್ತಾ ಎಂದರೆ ಸಾಕ್ಷಿಯು ನಮ್ಮ ಶಾಖಾ ವ್ಯವಸ್ಥಾಪಕರು ಈ ಕುರಿತಾಗಿ ತಿಳಿದುಕೊಂಡಿರುತ್ತಾರೆ ಎಂದು ನುಡಿಯುತ್ತಾರೆ.

3. ಆರೋಪಿತನು ನ್ಮ್ಮ ಫಿರ್ಯಾದಿ ಸಂಸ್ಥೆಯಲ್ಲಿ ಇದೇ ಮೊದಲ ಸಾಲವನ್ನು ಮಾಡಿರುತ್ತಾನೆ. ಸಾಲದ ಅರ್ಜಿ ನೀಡಿದ ನಂತರ ನಮ್ಮ ಫಿರ್ಯಾದಿ ಸಂಸ್ಥೆಯವರು ಸಾಲ ಮಂಜೂರಾಗುತ್ತದೆ ಎಂದರೆ ಸರಿ. ನಿಪಿ 7 ನ್ನು ನೀಡುವ ಪೂರ್ವದಲ್ಲಿ ಯಾವುದೇ ಸಾಲವನ್ನು ಮಂಜೂರು ಮಾಡುವುದಿಲ್ಲ ಎಂದರೆ ಸರಿ. ನಿಪಿ 7 ರ ಪ್ರಧಾನ ಕಛೇರಿಯು ದಿನಾಂಕಃ 01/09/2023 ರಲ್ಲಿ ಸಾಲ ಮಂಜೂರು ಮಾಡಿರುತ್ತಾರೆ ಎಂದರೆ ಸರಿ. ನಿಪಿ7 ನ್ನು ನಾವು ದಿನಾಂಕಃ 25/09/2023 ರಂದು ಪಡೆದುಕೊಂಡಿರುತ್ತೇವೆ ಎಂದರೆ ಸಾಕ್ಷಿಯು ನಜರಚೂಕಿನಿಂದ ದಿನಾಂಕದ ಬದಲಾವಣೆ ಆಗಿರುತ್ತದೆ ಎಂದು ನುಡಿಯುತ್ತಾರೆ.

**(ಈ ಹಂತದಲ್ಲಿ ಆರೋಪಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ಸಮಯವಕಾಶ ನೀಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

ಸಹಿ ಇದೆ.

ಹೆ.ಪ್ರ.ದ.ನ್ಯಾ.ದಂ. ಕುಮಟಾ